<u>ಅಸಲು ದಾವಾಃ-</u> 348/2014 ಪಿ.ಡಬ್ಲ್ಯೂಃ- 1

ದಿನಾಂಕಃ 27.01.2025 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ- 1 ಮತ್ತು 2 ನೇ ಪ್ರತಿವಾದಿ ಪರ ಶ್ರೀ.ಟಿ ಕೆ ಆರ್ ವಕೀಲರಿಂದ</u>

ನಿಪಿ 8 ಯಾವ ದಾಖಲೆ ಎಂದರೆ ಚೆಕ್ಕುಬಂಧಿ ದಾಖಲೆ ಎಂದು ನುಡಿಯುತ್ತಾರೆ. ನಿಪಿ 8 ರ ದಾಖಲೆಯನ್ನು ಯಾರು ತಯಾರಿಸಿರುತ್ತಾರೆ ಎಂದರೆ ಸಾಕ್ಷಿ ರಾಜಪ್ಪ ಎಂದು ನುಡಿಯುತ್ತಾರೆ. ನೋಂದಾವಣೆ ಉದ್ದೇಶಕ್ಕಾಗಿ ನಿಪಿ 8 ರ ದಾಖಲೆಯನ್ನು ಗ್ರಾಮ ಪಂಚಾಯತಿಯಲ್ಲಿ ಬರೆಸಿಕೊಂಡು ಬರುತ್ತೇನೆ ಎಂದರೆ ಸರಿಯಲ್ಲ. ನಿಪಿ 8 ದಿಃ 01.07.2008 ರಲ್ಲಿ ತಯಾರಿಸಿದ ದಾಖಲೆ ಎಂದರೆ ಸರಿ. ನಿಪಿ 9 ದಾಖಲೆಯನ್ನು ದಿಃ 13.08.2008 ಬರೆದಿರುತ್ತಾರೆ ಎಂದರೆ ಸರಿ. ಇದು ಸ್ಥಳಕ್ಕೆ ಬಂದು ಅಳತೆ ಮಾಡಿರುವುದಾ ಅಥವಾ ಮಹಜರ್ ಮಾಡಿರುವುದಾ ಎಂದರೆ ಸಾಕ್ಷಿಯು ಅಳತೆ ಮಾಡಿರುವುದು ಎಂದು ನುಡಿಯುತ್ತಾರೆ. ಯಾರು ಅಳತೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಗ್ರಾಮ ಪಂಚಾಯತಿಯ ಸಿಬ್ಬಂದಿ, ಸೆಕ್ರೆಟರಿ ಎಂದು ನುಡಿಯುತ್ತಾರೆ. ನಿಪಿ 9 ರ ದಾಖಲೆಯಲ್ಲಿ ಯಾವ ಅಧಿಕಾರಿಯ ಸಹಿ ಇದೆ ಎಂದರೆ ಸಾಕ್ಷಿ ನಾನು ಇರಲಿಲ್ಲ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ 9 ರ ದಾಖಲೆಯ ಆಧಾರದ ಮೇಲೆ ರಾಜಪ್ಪರವರಿಂದ ನನ್ನ ತಮ್ಮ ಸದಾಶಿವಪ್ಪರವರು ಆಸ್ತಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ